ಪರವಾನಗಿ ಸಿಗುವ ತನಕ ಕಾತರ, ಕುತೂಹಲಗಳೇ. ಅನಂತರ ಯಾರೊಬ್ಬರಿಗೆ ನಿರಾಸಕ್ತಿಯಾದರೂ ರಸವಿಲ್ಲದ ಕಬ್ಬಿನ ಕತೆ. ಶರ್ಮಿಯ ಅಸಹಕಾರ ನೋಡಿದರೆ ರಕ್ಕಸನಂತೆ ವರ್ತಿಸಬೇಕು ಅನ್ನಿಸುತ್ತಿದ್ದರೂ ನಿಗ್ರಹಿಸಿಕೊಳ್ಳುತ್ತಿದ್ದೆ. ದೈಹಿಕ ವಾಂಛೆ ಸಹ ನಮ್ಮ ರೆಗ್ಯುಲರ್ ಹಸಿವು ಬಾಯಾರಿಕೆ, ನಿದ್ದೆಯಂತೆ ಅಂತ ಯಾಕೆ ಅರಿಯರೋ? 'ಹೆಂಡತಿ ತವರಿಗೆ ಹೋದಾಗ ನನ್ನ ಪಾಡು ಬೇಡ. ಫಾರ್ಚುನೇಟ್ಲಿ, ನನ್ನ ಹೆಂಡತಿ ನನ್ನನ್ನು ಅರ್ಥಮಾಡ್ಕೊಂಡಿದ್ದಾಳೆ, ತಕರಾರಿಲ್ಲ' ಸಹೋದ್ಯೋಗಿ ಕರ್ಪೂರ್ ಹೇಳಿದಾಗ ಕ್ಷಣಕಾಲ ಅಸೂಯೆ ಉಂಟಾಗಿದ್ದಂತೂ ಸತ್ಯ. ಈ ದುರದೃಷ್ಟ ಜೀವಕ್ಕೆ ಅದು ದುಬಾರಿ. ಇನ್ನೇನು ಅಲ್ಲಿಂದ ಹೊರಬಂದಾಯ್ತು, ಶರ್ಮಿಳಾ ನನ್ನ ಮಟ್ಟಿಗೆ ಮುಗಿದ ಅಧ್ಯಾಯ.

ಫಕ್ಕನೆ ಸೃಜನಾಳ ಮುಖ ಕಣ್ಮುಂದೆ ಬಂದಂತಾಯ್ತು. ದಾಂಪತ್ಯದ ಸೋಗಿನಲ್ಲಿ ಸಾಂಗತ್ಯ ಎಂಬ ವಾಸ್ತವವನ್ನು ಮೆಟ್ಟಿರುವಳೆ? ಸಾಮಾಜಿಕ ಬೇಲಿ ಯಾ ನೈತಿಕತೆಯ ಎಲ್ಲೆಯನ್ನು ಮೀರದಂತಹ ವಿವೇಕ? ಹಾಗಿದ್ದಲ್ಲಿ ನನ್ನನ್ನು ಚುಡಾಯಿಸಿದ್ದು ಏಕಿರಬಹುದು? ಸುಮ್ಮನೆ ಇರಲಾರದು. ಹಾಗೆ ನೋಡಿದರೆ, ಗ್ರೂಪ್‌ನಲ್ಲಿ ಹೆಚ್ಚು ಬರುವವಳಲ್ಲ. ಪಕ್ಷಕ್ಕೋ ತಿಂಗಳಿಗೋ ಎಂಬಂತೆ ಒಂದೆರಡು ಫಾರ್ವರ್ಡ್, ಕಾಮೆಂಟ್‌ಗಳಿಗೆ ಸೀಮಿತ. ನನ್ನ ಉಡುಗೆಯನ್ನು ಗುರುತಿಸಿ, ಮೆಚ್ಚಿದ್ದಾಳೆ ಎಂದರೆ ನನ್ನ ವಿಷಯ ತಿಳಿದಂದಿನಿಂದ ಫಾಲೋ ಮಾಡ್ತಿರಬಹುದೆ? ಕೊನೆಗೆ ನಾನು ಇಲ್ಲಿಗೆ ಬಂದೆನೆಂದ ಮೇಲೆ ಮಾತನಾಡಲು ಅವಕಾಶಕ್ಕಾಗಿ ಕಾಯುತ್ತಿದ್ದಳೇ? ಉದಯನ ಮನೆ ಸಮಾರಂಭವನ್ನು ಕ್ಯಾಚ್ ಮಾಡಿಕೊಂಡಿರಬಹುದೆ? ನನ್ನ ಮೇಲೆ ಅವಳಿಗೂ ಆಕರ್ಷಣೆ... ನನಗಿರುವಂತೆ? ಮೈಯೊಳಗಿನ ರಕ್ತವೆಲ್ಲ ಮುಖಕ್ಕೆ ಬಂದಾಯಿತು. ನನ್ನನ್ನು ಮೆಚ್ಚದಿರಲು ಕಾರಣಗಳು ಇರವು. ಲಾಸ್ಟ್ ಬೆಂಚಿಗೂ ಫಸ್ಟ್ ಬೆಂಚಿಗೂ ಕ್ರಶ್! ನನ್ನ ಆಲೋಚನೆಗೆ ನಗೆ ಬರದಿರಲಿಲ್ಲ. ನನ್ನ ನಿದ್ದೆ ಕಸಿಯುವಷ್ಟು ಆಕ್ರಮಿಸಿದ್ದಳು.

★★★

ಬೆಳಗ್ಗೆ ಆರಕ್ಕೆ ಫಣಿ ಕರೆ ಮಾಡಿ, 'ಸಾರಿ, ಇವತ್ತಿನ ಪ್ರೋಗ್ರಾಮ್ ಕಾನ್ಸಲ್, ನನಗೆ ತುರ್ತು ಕೆಲಸವಿದೆ. ಸಂಜೆಯ ತನಕ ಬಿಡುವಾಗೋಲ್ಲ, ಏಳು ಗಂಟೆ ಮೇಲೆ ಸೃಜಿಗೆ ಮೆಸೇಜ್ ಮಾಡ್ತೀನಿ, ಏರ್‌ಪೋರ್ಟ್ ಕಡೆ ಹೊರಟಿದ್ದೀನಿ, ನಾಳೆ ರೆಸಾರ್ಟ್‌ನಲ್ಲಿ ಭೇಟಿಯಾಗೋಣ, ಬೈ' ಎಂದು ಸುಪ್ರಭಾತ ಹಾಡಿದಾಗ ಇದೇನು ಕನಿಷ್ಠ ಅವಳನ್ನು ಹತ್ತಿರದಿಂದ ನೋಡುವ, ಮುಕ್ತವಾಗಿ ಹರಟುವ ಸೌಭಾಗ್ಯವೂ ಇಲ್ಲದಾಯ್ತೆ ಅನ್ನಿಸಿ ಅಸಹಾಯಕತೆ ಕವಿಯಿತು. ಹತ್ತು ನಿಮಿಷ ಕಳೆಯುವಷ್ಟರಲ್ಲಿ

